# ಪ್ರೇಮ, ಆಕರ್ಷಣೆ ಮತ್ತು ವಂಚನೆ...

‘ಕುಂಜಮ್ಮಾಳಿಗೆ ಮಕ್ಕಳು...?

‘ಅವಳಿಗೆ ಒಬ್ಬ ಮಗನಿದ್ದಾನೆ, ಲ್ಯೂಕಾ ಎಂದು ಅವನ ಹೆಸರು; ಅವನು ನನಗಿಂತ ಮೂರು ವರ್ಷ ಚಿಕ್ಕವನು. ಅವನು ತುಂಬಾ ಕಿತಾಪತಿಯಾಗಿದ್ದ’.

ಅಮ್ಮ ಇಹಲೋಕವನ್ನು ತ್ಯಜಿಸಿದ ನಂತರ, ನಮ್ಮ ಪೋಷಣೆಯ ಜವಾಬ್ದಾರಿ ಅಪ್ಪನ ಹೆಗಲಿಗೆ ಬಿತ್ತು. ಕುಂಜಮ್ಮಾ ನಮ್ಮ ಮನೆಗಂತೂ ಬರಲಿಲ್ಲ, ಆದರೆ ಪಕ್ಕದಲ್ಲಿದ್ದು ನಮ್ಮ ಪರಿವಾರಕ್ಕೆ ಸಾಕಷ್ಟು ಸಹಕಾರ ಕೊಟ್ಟಳು. ಅಮ್ಮ ಸತ್ತಾಗ ಅಪ್ಪನ ವಯಸ್ಸು ನಲ್ವತ್ತೈದಾಗಿತ್ತು, ಆದರೆ ಅವರು ಎರಡನೆಯ ಮದುವೆಯನ್ನು ಮಾಡಿಕೊಳ್ಳದೆ, ಚರ್ಚಿನ ಕಾರ್ಯಕ್ರಮಗಳಲ್ಲಿ ಮಗ್ನರಾದರು. ಹೆಂಡತಿಯ ಸಾವಿನ ನಂತರ ಅವರ ಜೀವನದಲ್ಲಿ ವಿಶೇಷ ಪರಿವರ್ತನೆಯೊಂದು ಬಂದಿತ್ತು; ಸೋಲಿನ ಭಾವನೆ, ಅದೃಷ್ಟ ಮತ್ತು ನಿಯತಿಯ ಎದುರು ಸಮರ್ಪಣೆಯ ಭಾವನೆ ಅವರಲ್ಲಿ ಮನೆಮಾಡಿತು. ಅವರ ಧಾರ್ಮಿಕ ಮನೋಭಾವ ಹೆಚ್ಚಿತು; ದೇವರಲ್ಲಿ ಅವರ ಆಸ್ಥೆ ಗಾಢವಾಯಿತು, ಅವರು ಸನ್ಯಾಸಿಯಂತಾದರು. ಅವರ ಈ ಪರಿವರ್ತನೆ ಕುಂಜಮ್ಮಾಳಿಗೆ ಲೇಶಮಾತ್ರವೂ ಇಷ್ಟವಾಗಲಿಲ್ಲ. ಸಾಯುವುದಕ್ಕೆ ಮೊದಲು ಅಮ್ಮ ತನ್ನ ತಂಗಿ ಕುಂಜಮ್ಮಾಳಿಗೆ, ನನ್ನ ಮಕ್ಕಳನ್ನು ನೋಡಿಕೋ ಎಂದು ಹೇಳಿದ್ದಳು; ಇದನ್ನು ಕುಂಜಮ್ಮಾ ಪಾಲಿಸಲು ಪ್ರಯತ್ನಿಸುತ್ತಿದ್ದಳು, ಅದರೆ ಅವಳಿಗೂ ಅಪ್ಪನಿಗೂ ಅನೇಕ ವಿಷಯಗಳಲ್ಲಿ ಹೊಂದಾಣಿಕೆಯಿರಲಿಲ್ಲ. ಜೀವನದಲ್ಲಿ ನಮಗೆ ವಸ್ತುವೊಂದು ಅನಪೇಕ್ಷಿತ ಮೂಲೆಯಿಂದ ಲಭಿಸಿದಾಗ, ಅದಕ್ಕೆ ಮೌಲ್ಯವಿರುತ್ತದೆ. ಕುಂಜಮ್ಮಾಳ ಹಸ್ತಕ್ಷೇಪ ಹದ್ದು ಮೀರಲಾರಂಭಿಸಿತು.

ಕುಂಜಮ್ಮಾ ನಮ್ಮನ್ನು ಇಷ್ಟಪಡುತ್ತಿದ್ದಳು, ಇದರಲ್ಲಿ ಅನುಮಾನವಿರಲಿಲ್ಲ; ಆದರೆ ಸಾಮಾನ್ಯವಾಗಿ ಅಪ್ಪನೊಂದಿಗೆ ಅವಳ ಸಂಘರ್ಷ ನಡೆಯುತ್ತಿತ್ತು. ಕೆಲವೊಮ್ಮೆ ಇಬ್ಬರನ್ನು ಸಂಘರ್ಷದಿಂದ ದೂರ ಮಾಡಬೇಕಾಗುತ್ತಿತ್ತು. ಆದರೆ ನಾವು ಇಬ್ಬರಿಗೂ ಅವಮಾನ ಮಾಡಲು ಬಯಸುತ್ತಿರಲಿಲ್ಲ. ನಮ್ಮದು ವಿಚಿತ್ರ ಪರಿಸ್ಥಿತಿಯಾಗುತ್ತಿತ್ತು. ಕುಂಜಮ್ಮಾಳಲ್ಲಿ ನಾವು ನಮ್ಮ ತಾಯಿಯನ್ನು ಕಾಣುತ್ತಿದ್ದೆವು, ಆದರೆ ಅಪ್ಪಾ ಎಷ್ಟಾದರೂ ನಮ್ಮ ಅಪ್ಪಾ ತಾನೇ!

ವಾಸ್ತವವಾಗಿ ಕುಂಜಮ್ಮಾ ಮತ್ತು ಅಪ್ಪನ ನಡುವಿನ ಮನಸ್ತಾಪಕ್ಕೆ ಅನೇಕ ಕಾರಣಗಳಿದ್ದವು. ಅಪ್ಪಾ ತಮ್ಮ ಐವರು ಸಹೋದರರು ಮತ್ತು ಸಹೋದರಿಯರಿಗಿಂತ ದೊಡ್ಡವರಾಗಿದ್ದರು. ಮೂವರು ಸಹೋದರರು ಮತ್ತು ಸಹೋದರಿಯರು ಬೇರೆ ನಗರದಲ್ಲಿ ವಾಸಿಸುತ್ತಿದ್ದರು. ಅವರೊಂದಿಗೆ ನಮ್ಮ ವಿಶೇಷ ಸಂಬಂಧವಿರಲಿಲ್ಲ. ವಿವಾಹ ಸಂದರ್ಭಗಳಲ್ಲಿ ಮಾತ್ರ ನಾವು ಭೇಟಿಯಾಗುತ್ತಿದ್ದೆವು. ಆದರೆ ಅಪ್ಪನ ಕೊನೆಯ ಸಹೋದರ ಪಾಪುನ್, ಮಲಪ್ಪುರಮ್‌ನಲ್ಲಿ ನಮ್ಮ ಪಕ್ಕದಲ್ಲಿ ವಾಸಿಸುತ್ತಿದ್ದರು.

‘ಇದು ನಿಮ್ಮ ಸಂಸ್ಕೃತಿಯಲ್ಲಿ ಒಂದು ಒಳ್ಳೆಯ ಅಂಶ; ಪ್ರತಿಯೊಂದು ಸಂಬಂಧಕ್ಕೂ ಒಂದು ಹೆಸರು ಇದೆ’ ಎಂದ ಪಾಲ್.

ನಾವು ನಮ್ಮ ಅಂಕಲ್ ಮತ್ತು ಆಂಟಿಯನ್ನು ಕುಂಜಮ್ಮಾ, ಚೆರಿಅಮ್ಮಾ, ಪಾಪುನ್ ಹೆಸರುಗಳಿಂದ ಅರಿತಿದ್ದೆವು. ಅವರ ನಿಜ ನಾಮಧೇಯಗಳಿಂದ ನಾವು ಪರಿಚಿತರಾಗಿರಲಿಲ್ಲ.

ಹೀಗಾಗಿ ನಮಗೆ ಒಂದು ವಿಷಯ ತಿಳಿಯಿತು...

